ಸಾಕ್ಷಿಯನ್ನು ದಿಃ07.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ**

ನಮ್ಮಮೂಲ ಪುರುಷ ಚಿಕ್ಕೇಗೌಡರ ಹೆಂಡತಿ ತಿಮ್ಮಕ್ಕ ಎಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಪಹಣಿ ಪತ್ರಿಕೆ ಮತ್ತು ವಂಶವೃಕ್ಷ ಕೊಟ್ಟಿರುತ್ತೇನೆ . ಫಾರಂ ನಂ.5 ಮತ್ತು 6 ರಲ್ಲಿ ವಂಶವೃಕ್ಷ ಬರೆದಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದರಲ್ಲಿ ಜಮೀನಿನ ಹೆಸರು ಇದೆ ಎಂದು ಹೇಳುತ್ತಾರೆ. ಪಟೇಲ್ ಚಿಕ್ಕೇಗೌಡ ನಮ್ಮ ಮೂಲ ಪುರುಷ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ತಹಶೀಲ್ದಾರರಿಂದ ಪಡೆದುಕೊಂಡಿರುವುದಿಲ್ಲ. ವಂಶವೃಕ್ಷವನ್ನು ನಾನು ಹೇಳಿ ಬರೆಸಿರುವುದಿಲ್ಲ. ವಂಶವೃಕ್ಷವನ್ನು ನನ್ನ ತಂದೆಯವರು ಬರೆದಿಟ್ಟಂತಹ ವಂಶವೃಕ್ಷದ ಆಧಾರದ ಮೇಲೆ ಹೇಳಿ ಬರೆಸಿದ್ದೇನೆ. ಈ ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ತಂದೆ ಬದುಕಿದ್ದರು. 2015 ರಲ್ಲಿ ನನ್ನ ತಂದೆ ಮೃತಪಟ್ಟಿದ್ದಾರೆ. ನನ್ನ ತಂದೆಯ ಮರಣ ಸಮರ್ಥನಾ ಪತ್ರವನ್ನು ಹಾಜರು ಪಡಿಸಿರುತ್ತೇನೆ

ನಮ್ಮ ಮತ್ತು ಪ್ರತಿವಾದಿಗಳ ಮೂಲ ಪುರುಷ ಸಣ್ಣೇಗೌಡ ಎಂದರೆ ಸಾಕ್ಷಿ ಮೂಲ ಪುರುಷ ಪಟೇಲ್ ಚಿಕ್ಕೇಗೌಡ ಅವರ ಮಕ್ಕಳು ಸಣ್ಣೇಗೌಡ, ಚಿಕ್ಕೇಗೌಡ ಎಂದು ಹೇಳುತ್ತಾರೆ. ಸಣ್ಣೇಗೌಡ ಮತ್ತು ಚಿಕ್ಕೇಗೌಡ ಪಟೇಲ್ ಚಿಕ್ಕೇಗೌಡನ ಮಕ್ಕಳು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಪಹಣಿ ಮತ್ತು ಮ್ಯುಟೇಷನ್ ಕೊಟ್ಟಿರುತ್ತೇನೆ. ಸಣ್ಣೇಗೌಡನಿಗೆ ಸಣ್ಣೇಗೌಡ ಯಾನೆ ಸಣ್ಣ ಪಾತೇಗೌಡ ಮತ್ತು ಚಿಕ್ಕೇಗೌಡ ಯಾನೆ ಚಿಕ್ಕಣ್ಣ ಎನ್ನುವ ಇಬ್ಬರು ಮಕ್ಕಳು ಇದ್ದಾರೆ. ಸಾಕ್ಷಿ ಮುಂದುವರೆದು 4 ಜನ ಹೆಣ್ಣು ಮಕ್ಕಳು ಎಂದು ಹೇಳುತ್ತಾರೆ. ಚಿಕ್ಕೇಗೌಡ ಯಾನೆ ಚಿಕ್ಕಣ್ಣನ ಹೆಂಡತಿ ಹೆಸರು ಗಿರಿಯಮ್ಮ ಎಂದರೆ ಸರಿಯಲ್ಲ. ಚಿಕ್ಕೇಗೌಡ ಯಾನೆ ಚಿಕ್ಕಣ್ಣನ ಹೆಂಡತಿ ಹೆಸರು ತಿಮ್ಮಕ್ಕ.

ಸಣ್ಣೇಗೌಡನ ಮಗ ಸಣ್ಣ ಪಾತೇಗೌಡ ಮತ್ತು ಚಿಕ್ಕಣ್ಣ ಹೆಂಡತಿ ಗಿರಿಯಮ್ಮ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಣ್ಣೇಗೌಡನ ಮಗ ಸಣ್ಣ ಪಾತೇಗೌಡ ಎಂದರೆ ಸರಿ. ಸಣ್ಣೇಗೌಡನ ಸಹೋದರ ಚಿಕ್ಕೆಗೌಡ ಎಂದರೆ ಸರಿ. ಆತನ ಹೆಂಡತಿ ಗಿರಿಯಮ್ಮ ಎಂದರೆ ಸರಿ. ಚಿಕ್ಕೇಗೌಡ ಮತ್ತು ಗಿರಿಯಮ್ಮನಿಗೆ ಮಕ್ಕಳಿಲ್ಲದ ಕಾರಣ ಅವರು ಅವರ ಸಹೋದರ ಸಣ್ಣೇಗೌಡನ 2 ನೇ ಮಗ ಚಿಕ್ಕೇಗೌಡನನ್ನು ದತ್ತು ತೆಗೆದುಕೊಂಡರು ಎಂದರೆ ಸರಿ. ಚಿಕ್ಕಣ್ಣನ್ನು ದತ್ತು ಪಡೆದು ಕೊಂಡ ನಂತರ ಚಿಕ್ಕಣ್ಣ ಮತ್ತು ಉಳಿದ ಸಣ್ಣೇಗೌಡನ ಮಕ್ಕಳು ಒಟ್ಟಿಗೆ ಇದ್ದರು ಎಂದರೆ ಸರಿ.

ಸಣ್ಣೇಗೌಡನ ಮೊದಲನೆ ಮಗ ಸಣ್ಣಪಾತೇಗೌಡನಿಗೆ ಪಾತೇಗೌಡ ಒಬ್ಬನೇ ಮಗ ಎಂದರೆ ಸರಿ. ಆತನ ಹೆಂಡತಿ ತಿಮ್ಮಕ್ಕ ಅಂದರೆ ಈ ಕೇಸಿನ ಮೊದಲನೆ ವಾದಿ ಎಂದರೆ ಸರಿ. ಪಾತೇಗೌಡ ಮತ್ತು ತಿಮ್ಮಕ್ಕನಿಗೆ 4 ಜನ ಮಕ್ಕಳು ಎಂದರೆ ಸರಿ. ಅವರ ಮೊದಲ ಮಗ ಪಂಚಣ್ಣ ಮತ್ತು ಕಮಲಮ್ಮ ಉಮಾದೇವಿ, ಆನಂದ ಎಂಬ ಮಕ್ಕಳು ಎಂದರೆ ಸರಿ. ಚಿಕ್ಕಣ್ಣ ಯಾನೇ ಚಿಕ್ಕೇಗೌಡ ಇವರಿಗೆ ತಿಮ್ಮಕ್ಕ ಮತ್ತು ಹಟ್ಟಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ತಿಮ್ಮಕ್ಕ ಇವರಿಗೆ ಪಾತಯ್ಯ, ಚಿಕ್ಕೇಗೌಡ ಮತ್ತು ಮಹಲಿಂಗಪ್ಪ ಎಂಬ ಮಕ್ಕಳು ಎಂದರೆ ಸರಿ. ಅವರುಗಳಲ್ಲಿ ಚಿಕ್ಕೇಗೌಡ ಮತ್ತು ಮಹಲಿಂಗಪ್ಪ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳು ಎಂದರೆ ಸರಿ. ಸಣ್ಣೇಗೌಡ ಮತ್ತು ಚಿಕ್ಕೇಗೌಡ ಜೀವಂತ ಇದ್ದಾಗ ಅವರ ಮಧ್ಯೆ ವಿಭಾಗವಾಗಿತ್ತು ಎಂದರೆ ಸರಿಯಲ್ಲ.

ಸಣ್ಣೇಗೌಡ ಮತ್ತು ಚಿಕ್ಕೇಗೌಡ ಒಟ್ಟಿಗೆ ಇದ್ದರು. ಅವರು ಒಂದೇ ಮನೆಯಲ್ಲಿ ವಾಸವಿದ್ದರು. ಸಣ್ಣೇಗೌಡ ಮತ್ತು ಚಿಕ್ಕೇಗೌಡ ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಚಿಕ್ಕೇಗೌಡರು ಚಿಕ್ಕಣ್ಣನನ್ನು ದತ್ತು ಪಡೆಯುವ ಮೊದಲೇ ವಿಭಾಗವಾಗಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ

ಆಸ್ತಿಗಳು ಎಂದು ತೋರಿಸಲು ಪಹಣಿ ಮತ್ತು ಮ್ಯುಟೇಷನ್ ಹಾಜರು ಮಾಡಿದ್ದೇನೆ.

ಆ ದಾಖಲಾತಿಯಲ್ಲಿ ವಿಭಾಗದ ಬಗ್ಗೆ ಬರೆದಿಲ್ಲ ಎಂದು ಹೇಳುತ್ತಾರೆ. ದಾವಾ ಐಟಂ ನಂ.5, 9 ರಿಂದ 12 ಪಿತ್ರಾರ್ಜಿತ ಆಸ್ತಿಗಳು. ಆ ಆಸ್ತಿಯು ಪಟೇಲ್ ಚಿಕ್ಕೆಗೌಡ ಮತ್ತು ಸಣ್ಣಜ್ಜಿಗೆ ಬಂದಿತ್ತು. ಆ ಬಗ್ಗೆ ಪಟೇಲ್ ಚಿಕ್ಕೇಗೌಡನ ಹೆಸರಿಗೆ ಕ್ರಯ ಪತ್ರಗಳು ಇವೆ ದಾವಾ ಐಟಂ ನಂ.1 ರಿಂದ 3, 6, 7 ಸ್ವತ್ತುಗಳು ಪಟೇಲ್ ಚಿಕ್ಕೇಗೌಡನ ಪಿತ್ರಾರ್ಜಿತ ಆಸ್ತಿಗಳು. ದಾಖಲಾತಿಗಳಲ್ಲಿ ಆ ಆಸ್ತಿಗಳು ಪಟೇಲ್ ಚಿಕ್ಕೇಗೌಡನ ಪಿತ್ರಾರ್ಜಿತ ಆಸ್ತಿಗಳು ಎಂದು ಇದೆ. ನಾನು ದಾವಾ ಹಾಕುವ ಸಮಯದಲ್ಲಿ ದಾವಾಸ್ತಿಗಳು ಮಹಲಿಂಗಪ್ಪ ಮತ್ತು ಚಿಕ್ಕೇಗೌಡನ ಹೆಸರಿನಲ್ಲಿದ್ದವು. ಮಹಲಿಂಗಪ್ಪ ಮತ್ತು ಚಿಕ್ಕೇಗೌಡನಿಗೆ ಆಸ್ತಿಗಳು ಅವರ ತಂದೆಯಿಂದ ಬಂದಿವೆ. ಅವರ ತಂದೆಗೆ ಗಿರಿಯಮ್ಮನ ಮೂಲಕ ಪ್ರತಿವಾದಿ 1 ರ ಹೆಸರಿಗೆ ಬಂದಿರುತ್ತವೆ. ನನ್ನ ತಂದೆಯಾಗಲೀ ತಾತನಾಗಲೀ ಜಮೀನುಗಳನ್ನು ಮಾರಾಟ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.